ಚಿತ್ರದುರ್ಗ ಡಿಸ್ಟ್ರಿಕ್ಟ್.

ಫಾರೆಸ್ಟ್ ಇಲಾಖೆ.

ನೋಟಿಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಡಿಸ್ಟ್ರಿಕ್ಟಿಗೆ ಸೇರಿದ ಯಿದರಲ್ಲಿ ನಮೂದಿಸುವ ತಾಲ್ಲೂಕುಗಳಲ್ಲಿ ದೊರೆಯುವ ತಂಗಡಿ, ನಾಯಿಬೇಲ ಮತ್ತು ಕಕ್ಕೆಜಕ್ಕೆಗಳನ್ನ ಜಮಾಯಿಸಿ ತೆಗದುಕೊಂಡು ಹೋಗತಕ್ಕ ಯಿಜಾರೆಯ ವಟ್ಟು ಸ್ವತಂತ್ರದ ಹಕ್ಕು ಬಹಿರಂಗವಾಗಿ ಹರಾಜು ಮೂಲಕ ಡೆಪ್ಯುಟಿ ಕಮ್ಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಆಫಿಸರ ಮೂಲಕ ವಿಕ್ರಯಿಸಲ್ಪಡುತ್ತೆ. ಹರಾಜು ತಾರೀಖು ಮತ್ತು ಹರಾಜು ನಡಿಸುವ ಸ್ಥಳ ವಗೈರೆ ತಪ್ಯೀಲುಗಳು ಈ ಕೆಳಗೆ ವಿವರಿಸಲ್ಪಟ್ಟಿರುತ್ತವೆ.

ತಾಲ್ಲೂಕು.	ನಂಬರ್.	ಹೋಬಳಿಗಳು.	ಹರಾಜು ತಾರೀಖು.	ಹರಾಜು ಹಾಕುವ ಸ್ಥಳ.	ಇಜಾರೆ ಹಕ್ಕಿನ ಕಾಲ.	ಷರಾ.
ಜಗಲೂರು ..	1	ಸೊಕ್ಕೆ	1896ನೇ ಇಸವಿ ಸೆಪ್ಟಂಬರ್ ತಾರೀಖು 24	ಜಗಲೂರು	1896ನೇ ಇಸವಿ ನವಂಬರು ಸುರ್ಸ್ಗೀ ಆಗಾಯತು 1897ನೇ ಇಸವಿ ಜೂರ್ ಆಖ್ರಿರವರಿಗೆ.	ತಾಲ್ಲೂಕಾವರು ಮಜು ಕಾವಲುಗಾರಾಗಿ ಆಗಲಿ ಅಥವಾ ಹೋಬಳಿಗಾಗಲಿ ಹರಾಜು ಮಾಡುವ ಮುನ್ನ ಆಫಿಸರವರಿಗೆ ಮುನಾಸಬು ತೋರಿದಂಥ ಹರಾಜು ಪಾತ್ರಲ್ಪಡುತ್ತೆ.
	2	ಬಿಳಚೋಡು				
	3	ಜಗಲೂರು				
	4	ಅಮೃತಮಹಲ್ ಕಾವಲ್				
ದಾವಣಗೆರೆ ...	1	ದಾವಣಗೆರೆ	1896ನೇ ಇಸವಿ ಸೆಪ್ಟಂಬರ್ ತಾರೀಖು 28	ದಾವಣಗೆರೆ		
	2	ಆನಗೋಡು				
	3	ಮಾಯಕೊಂಡೆ				
	4	ಅಣಜಿ				
	5	ಹದಡಿ				
	6	ಹರಿಹರ				
	7	ಮಲೆಬೆನ್ನೂರು				
	8	ಅಮೃತಮಹಲ್ ಕಾವಲುಗಳು				
ಹೊಳಲ್ಕೆರೆ ...	1	ಹೊಳಲ್ಕೆರೆ	1896ನೇ ಇಸವಿ ಸೆಪ್ಟಂಬರ್ ತಾರೀಖು 30	ಹೊಳಲ್ಕೆರೆ		
	2	ರಾಮಗಿರಿ				
	3	ಬರಮನಾಯಕನದುರ್ಗ				
	4	ತಾಳ್ಯ				
	5	ಹೊಸದುರ್ಗ				
	6	ಬಾಗೂರು				
	7	ಅಮೃತಮಹಲ್ ಕಾವಲು				
ಮೊಳಕಾಲುಮುರು	1	ಮೊಳಕಾಲುಮುರು	ಡಿಟೋ	ಮೊಳಕಾಲ್ ಮುರು		
	2	ದೇವಸಮುದ್ರ				
	3	ಅಮೃತಮಹಲ್ ಕಾವಲು				

2. ಮೇಲ್ಕಂಡ ತಾರೀಖಿನಲ್ಲಿ ಮಧ್ಯಾಹ್ನದ ಲಾಗಾಯತು ಸಾಯಿಂಕಾಲದವರಿಗೂ ಹರಾಜ್ ಕ್ರಮ ಜರಿಗಿಸುವದು.

3. ಮೇಲ್ಕಂಡ ವಟ್ಟು ಸ್ವತಂತ್ರದ ಇಜಾರೆ ಹಕ್ಕು ಆಖ್ರಿರು ಚಡದರಖಾಸ್ತುದಾರ್ರುಗಳಿಗೆ ಕೊಡಲ್ಪಡುವದು. ಆದರೆ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಸಹ ಹರಾಜು ನಡಿಸುವ ಆಫಿಸರವರು ಮೊಖ್ತಾರ್ರಾಗಿ ಯಿದ್ದಾರೆ. ಪೋಟೂಪೋಟಿಯಲ್ಲಿ ನಿಲ್ಲುವ ಆಖ್ರಿರು ಚಡಸವಾಲು ಮೊಬಲಗು ಮೇಲ್ಕಂಡ ಯಂಟು ತಿಂಗಳು ಕಾಲದಲ್ಲಿ ಕಡಿದು ಜಮಾ ಯಿಸಿಕೊಳ್ಳಲ್ಪಡುವ ಚಕ್ಕೆಯ ಖರೀದಿಯಂದು ಭಾವಿಸಲ್ಪಡುತ್ತದೆ.

4. ಇಜಾರೆ ಮಾಡಬೇಕೆಂದು ಆಪೇಕ್ಷಿಸುವವರು ತಾವೇ ಖುದ್ದಬಂದು ಹರಾಜಿನಲ್ಲಿ ಚಡಸವಾಲು ಮಾಡಬಹುದು ಅಥವಾ ತಮ್ಮಿಂದ ಅಪ್ಪಣೆ ಹೊಂದಲ್ಪಟ್ಟಿರುವ ಮುಖ್ತಾರೀಕರನ್ನಾಗಲಿ ಕಳಿಸಿಬಹುದು. ಚಡ ಸವಾಲು ಮಾಡಲಪೇಕ್ಷೆವುಳ್ಳವರು ಖಾತರೀ ಬಗ್ಗಾಗಿ ಐನೂತ್ತು ರೂಪಾಯಿಗಳನ್ನು ಹರಾಜ್ ಕಾಲದಲ್ಲಿ ಹರಾಜ್ ಮಾಡುವ ಆಫಿಸರವರಲ್ಲಿ ಕೇವಣಿ ಇಡಬೇಕು. ತಿರಸ್ಕರಿಸಲ್ಪಟ್ಟ ದರಖಾಸ್ತುದಾರ್ರು ಹಾಜರುಮಾಡಿದ್ದ ಡಿಪಾಜಿಟ್ಟು ಮೊಬಲಗನ್ನ ಹರಾಜ್ ಕೈದಾದ ಕೂಡ್ಲೆ ಡಿಪಾಜಿಟ್ದಾರ್ರಿಗೆ ವಾಪಸು ಮಾಡಲ್ಪಡುತ್ತದೆ. ಅಂಗೀಕರಿಸಲ್ಪಟ್ಟ ಸವಾಲುದಾರ್ರುಗಳು ತಮ್ಮ ಸವಾಲಿನ ಪೊಟ್ಟು ಮೊಬಲಗಿನಲ್ಲಿ ಮೊದಲು ಹಾಜರ್ಮಾಡಿದ್ದ ಮೊಬಲಗು ಸೇರ ಕಾಲುಹಿಸ್ಸೆಯನ್ನು ಪಾವತಿ ಮಾಡಬೇಕು. ಇದಕ್ಕೆ ತಪ್ಪಿದಲ್ಲಿ ಮೊದಲು ಇಟ್ಟುಇದ್ದ ಡಿಪಾಜಿಟ್ಟು ಸರ್ಕಾರಕ್ಕೆ ದಂಡವಾಗಿ ಸೇರಿಸಿ ಕೊಳ್ಳಲ್ಪಡುವದೂ ಅಲ್ಲದೆ ಬಾಬನ್ನ ದುಸರಾ ಹರಾಜ್ ಮಾಡಿಸುವದರಲ್ಲಿ ಪ್ರಂಟಗುವ ನಷ್ಟಕ್ಕೂ ಈತನನ್ನೇ ಗುರವಾಡಲ್ಪಡುತ್ತದೆ.

5. ಮೇಲ್ಕಂಡ ಮೇರೆಗೆ ನಡಿಸಲ್ಪಡಬೇಕಾಗಿ ಬರುವ ಯರಡನೇ ಹರಾಜಿನಲ್ಲಿ ಮೊದಲಿನ ಹರಾಜ್ ಚಡದರಖಾಸ್ತಿಗಿಂತ ಮೊಬಲಗು ಜಾಸ್ತಿಯಾದಲ್ಲಿ ಅಂಥಾ ಜಾಸ್ತಿ ಮೊಬಲಗಿನ ಹಕ್ಕು ಅವಲ್ ಚಡದರಖಾಸ್ತುದಾರನಿಗೆ ಇರುವದಿಲ್ಲ. ಮೊಬಲಗು ಕಮ್ಮಿಯಾದಲ್ಲಿ ಅಂಥಾ ಮೊಬಲಗನ್ನ ಅವಲ್ ಚಡದರಖಾಸ್ತುದಾರನಿಂದ ರವಿನ್ಯೂ ಡಿವ್ಯೋಂಡಿನಂತೆ ವಸೂಲು ಮಾಡಲ್ಪಡುತ್ತದೆ.

6. ಇಜಾರೆ ಬಾಬತು ಬಾಕಿ ಮುಕ್ಕಾಲು ಹಿಸ್ಸೆಯನ್ನ ಇದೇ ಇಸವಿ ಅಕ್ಟೋಬರ್ ಮಾಹೆ ಆಖೈರುವಳಗಾಗಿ ಖಜಾನೆಗೆ ಪಾರ್ಜಾವಣೆ ಮಾಡತಕ್ಕದ್ದು. ಅದಕ್ಕೆ ತಪ್ಪಿದಲ್ಲಿ ಮೊದಲು ಪಾವತಿಯಾದ ಕಾಲುಹಿಸ್ಸೆ ಶೇವಣಿಯು ಸರ್ಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಡುತ್ತದೆ, ಅಲ್ಲದೆ ಚಕ್ಕೆ ಜಪ್ತಾಯಿಸುವ ಹಕ್ಕು ಸಹ ಪುನಹ ಹರಾಜು ಮಾಡಲ್ಪಡುತ್ತದೆ.

7. ಹರಾಜು ಮಂಜೂರಾದ ಮೂರು ದಿವಸಗಳೊಳಗಾಗಿ ಇಜಾರೆದಾರನು ಈ ಕೆಳಗೆ ನಮೂದಿಸುವ ಷರತ್ತುಗಳ ಪ್ರಕಾರ ನಡದುಕೊಳ್ಳತಕ್ಕ ಬಗ್ಗೆ ಬದ್ಧನಾಗಿ ಮುಚ್ಚಳಿಕೆ ಬರದುಕೊಡಬೇಕು.

8. ಮೇಲ್ಕಂಡ ಮೇರೆ ಪೂರ್ತಿ ಮೊಬಲಗು ಇರಸಾಲು ಆದ ನಂತರ ಈ ಕೆಳಗೆ ನಮೂದಿಸಿರುವ ಷರತ್ತುಗಳು ಕಂಡು ಸರಿಯಾದ ಕಿಮ್ಮತಿನ ಛಾಪಾಕಾಗದದಲ್ಲಿ ಇದೇ ಇಸವಿ ನವಂಬರು ಗುರ್ಕೇ ತಾರೀಖಿನಲ್ಲಿ ಕರಾರು ಬರದುಕೊಟ್ಟು ಅನಂತರ ಬಾಬು ಸುಫರ್ದು ಹೊಂದಬೇಕಾಗಿರುತ್ತೆ.

ಷರತ್ತುಗಳ್ಯಾವವಂದರೆ:—

(1) ಬಂದುವರುಷಕ್ಕಿಂತಲೂ ಎಳೇದಾದ ಗಿಡವನ್ನ ಕಡಿಯುವದಿಲ್ಲ.

(2) ಕಡಿಯುವ ವಿಷಿಷ್ಟ ಮೋಟೂ ಮತ್ತು ರೆಂಬಗಳಲ್ಲಿರುವ ಚಕ್ಕೆಯನ್ನ ನಿಶ್ಶೇಷವಾಗಿ ತೆಗದುಕೊಳ್ಳುತ್ತೇನೆ. ಯಾವ ಗಿಡವನ್ನಾಗಲಿ ಸುಮ್ಮನೆ ಕಡಿದು ಚಕ್ಕೆಯನ್ನ ತೆಗಿಯದೆ ಬಿಡುವದಿಲ್ಲ.

(3) ಚಕ್ಕೆಯನ್ನ ತೆಗದ ನಂತರ ವಿಷಿಷ್ಟ ಸಾದೆಯೂ ಇಜಾರೆದಾರನಿಗೆ ಕೇರಿದ್ದೇ ಶಿವಾಯಿ ಸರ್ಕಾರಕ್ಕೆ ಕೇರಿದ್ದಲ್ಲ.

(4) ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಹುಕುಂ ಮಾಡುವ ಮೇರೆ ನಾನು ಸಾಗಿಸಿಕೊಂಡು ಹೋಗುವ ಪ್ರತಿ ಯೊಂದು ಗಾಡಿಯ ಚಕ್ಕೆಗೂ ಪ್ಯಾಸು ಪಡಿಯುತ್ತೇನೆ.

(5) ಡೆಪ್ಯೂಟಿ ಕಮ್ಮಿಷನರು ಅಥವಾ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರೇ ಆಗಲಿ ಅಥವಾ ಅವರಿಂದ ನೇಮಿಸಲ್ಪಟ್ಟ ನೌಕರರೇ ಆಗಲಿ ಮೊಕರರು ಮಾಡುವ ಮೇರಿಗೆ ಕರಾರು ಅನುಸರಿಸಿ ಜಪ್ತಾಯಿಸಿಕೊಂಡು ಹೋಗುವ ಚಕ್ಕೆಗೆ ತಪ್ಪೀಲಾಗಿ ಲೆಖ್ಖ ಇಡುತ್ತೇನೆ ಅಲ್ಲದೆ ಈ ಬಾಬತು ಲೆಖ್ಖವನ್ನು ಡೆಪ್ಯೂಟಿ ಕಮ್ಮಿಷನರು ಅಥವಾ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಅಥವಾ ಅವರಿಂದ ಗೊತ್ತು ಮಾಡಲ್ಪಡುವ ಇತರ ಆಫಿಸರು ಕೇಳಿದಾಗ್ಯೆ ತನಖೀಬಿಗ್ಗೆ ಹಾಜರುಮಾಡುತ್ತೇನೆ.

(6) ನಾನು ಜಪ್ತಾಯಿಸುವ ವಿಷಿಷ್ಟ ಚಕ್ಕೆಯನ್ನೂ 1897ನೇ ಇಸವಿ ಜೂನ್ ಆಖೈರ್‌ವಳಗಾಗಿ ನನ್ನ ಇಜಾರೆ ತಾಲ್ಲೂಕಿನಿಂದ ಹೊರಗೆ ಸಾಗಿಸಿಕೊಂಡು ಹೋಗುತ್ತೇನೆ.

(7) ಸ್ಟೇಪ್ ಫಾರೆಸ್ಟು ಮತ್ತು ಪ್ಲಾಂಟೇಷನ್‌ಗಳಲ್ಲಿ ಸಹ ನನ್ನಿಂದಾಗಲಿ ನನ್ನ ಕಡೆ ಜನಗಳಿಂದಾಗಲಿ ಬೆಂಕಿ ಅಪಾಯವೇ ಮೊದಲಾದ ಇನ್ಯಾವ ಕಾರಣಗಳಿಂದಾಗಲಿ ಖರೀದಿ ಬಾಳತಕ್ಕ ಮರಗಳು ಅಥವಾ ಫಸಲುಗಳು ನಾಶವಾದಲ್ಲಿ ಅದರಿಂದುಂಟಾಗುವ ನಷ್ಟಕ್ಕೆ ನಾನೇ ಜವಾಬು ಮಾಡಲು ಬದ್ಧನಾಗಿದ್ದೇನೆ.

(8) ಮೇಲ್ಕಂಡ ಷರತ್ತುಗಳ ಪೈಕಿ ಯಾವದನ್ನಾದರೂ ನಾನಾಗಲಿ ನನ್ನ ತರಫ ಜನಗಳಾಗಲಿ ಅತಿಕ್ರಮಿಸಿ ನಡದಲ್ಲಿ ನನ್ನ ಇಜಾರೆಯನ್ನ ರದ್ದು ಮಾಡಬಹುದು. ಮತ್ತು ನಾನು ಅದುವರಿಗೆ ಜವಾಯಿಸಿ ಹಾಜರು ಯಿಟ್ಟುಕೊಂಡು ಯಿರತಕ್ಕ ಚಕ್ಕೆಯನ್ನು ಸರ್ಕಾರದವರು ಜಪ್ತೀಮಾಡಬಹುದು.

ತಾರೀಖು 4ನೇ ಸೆಪ್ಟೆಂಬರ್ 1896.

ತಾರೀಖು 4ನೇ ಸೆಪ್ಟೆಂಬರ್ 1896.

ಸ್ಯ 1896-97ನೇ ಸಾಲಿಗೆ ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಇರುವ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿಯೂ ಪ್ಲಾಂಟೇಷನ್‌ಗಳಲ್ಲಿಯೂ ಪ್ಲೇಯಲ್ ರಿಜರ್ವ್ಸ್, ಗ್ರಾಮ ಫಾರೆಸ್ಟು ಮತ್ತು ಅವ್ಯತವಾಲ್ ಕಾವಲುಗಳಲ್ಲಿಯೂ ದೊರೆಯುವ ಈ ಕೆಳಗೆ ನಮೂದು ಮಾಡಲ್ಪಟ್ಟ ಪನಾರೇ ಜಿನಸಿಗಳನ್ನ ಜಪ್ತಾಯಿಸಿಕೊಳ್ಳುವ ಹಕ್ಕು ದಾರಿಯು ಈ ಕೆಳಗೆ ಕಂಡ ತಖ್ತೆಯಲ್ಲಿ ನಮೂದು ಮಾಡಲ್ಪಟ್ಟಿರುವ ತಾರೀಖುಗಳಲ್ಲಿಯೂ, ಸ್ಥಳಗಳಲ್ಲಿಯೂ ತಾಲ್ಲೂಕು ಅಮಲ್ದಾರ್ರು ಅಥವಾ ಡೆಪ್ಯೂಟಿ ಅಮಲ್ದಾರ್ರುಗಳ ರೂಬರೂ ತಾಲ್ಲೂಕುವಾರಿಯಾಗಲಿ ಅಥವಾ ಹೋಬಳಿವಾರಾಗಿಯಾಗಲಿ, ಅಥವಾ ಮತ್ತ್ಯಾವ ರೀತಿಯಾಗಿ ಆಗಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

ನಂ	ತಾಲ್ಲೂಕಿನ ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.	ಷರಾ.
1	ಚಿತ್ರದುರ್ಗ ..	2ನೇ ಅಕ್ಟೋಬರ್ 1896 ..	ಚಿತ್ರದುರ್ಗ	
2	ಚಳ್ಳಕೆರೆ ..	24ನೇ ಸೆಪ್ಟೆಂಬರ್ 1896 ..	ಚಳ್ಳಕೆರೆ	
3	ಹಿರಿಯೂರು ..	27ನೇ ಡಿಟೋ ಡಿಟೋ ..	ಹಿರಿಯೂರು	
4	ಹೊಳಲ್ಕೆರೆ, ಹೊಸದುರ್ಗ ..	29ನೇ ಡಿಟೋ ಡಿಟೋ ..	ಹೊಳಲ್ಕೆರೆ	
5	ದಾವಣಗೆರೆ, ಹರಿಹರ ..	27ನೇ ಡಿಟೋ ಡಿಟೋ ..	ದಾವಣಗೆರೆ	
6	ಜಗಳೂರು ..	23ನೇ ಡಿಟೋ ಡಿಟೋ ..	ಜಗಳೂರು	
7	ಮೊಳಕಾಲ್ಮುರು ..	29ನೇ ಡಿಟೋ ಡಿಟೋ ..	ಮೊಳಕಾಲ್ಮುರು	

846

ಪಸಾರೆ ಜಿನಸಿಗಳ ವಿವರ.

1 ಜೇನು, 2 ಜೇನುಮೇಣ, 3 ಕೆಂಪಲಾರಂಗು, 4 ಗೇರುಪಪ್ಪು, 5 ಹುಣಸೇಹಣ್ಣು, 6 ಹೊಂಗೇಕಾಯಿ, 7 ಬ್ಯಾಲದಹಣ್ಣು, 8 ಕಲ್ಲುಹುವ್ವು, 9 ಕಾಡುಹರಳು, 10 ಗೋಂದು, 11 ಮರಡಿಪಪ್ಪು, 12 ಕೀಗೇಕಾಯಿ, 13 ತಾರೇಕಾಯಿ, 14 ಪಪ್ಪಿಚಕ್ಕೆ, 15 ಅಳಲೇಕಾಯಿ, 16 ಕೀತಾಫಲ, 17 ಜಾಲಿಗುತ್ತ, 18 ಹೊಂಗೇ ಎಲೆ, 19 ಕಲ್ಲುಹುವ್ವು.

2. ಚೆಡರಖಾಸ್ತುದಾರರು ಹರಾಜು ಖೈದಾದ ಕೂಡ್ಲೆ ಹರಾಜು ವೊಬಲಗು ಪೈಕಿ ಕಾಲು ಹಿಸ್ಸೆಯನ್ನು ಠೇವಣಿ ಕಟ್ಟತಕ್ಕದ್ದು ಇದಕ್ಕೆ ತಪ್ಪಿದರೆ ಅವರನ್ನು ನಷ್ಟಕ್ಕೆ ಗುರಿ ಮಾಡಿ ಬಾಬು ದುಸರೇ ಹರಾಜು ಮಾಡಲ್ಪಡುವದು. ಆದರೆ ಆದರಿಂದ ವುಂಟಾಗುವ ಆದಾಯದಲ್ಲಿ ಸದರೀಯವರಿಗೆ ಏನೂ ದೊರಿಯಲಾರದು. ಹರಾಜು ಮುಂಜೂರಾದ ಸಂಗತಿಯನ್ನು ಚಡಸವಾಲ್‌ದಾರ್‌ರಿಗೆ ತಿಳಿಸಿದ ಬಂದು ವಾರದೊಳಗಾಗಿ ಬಾಕಿ ಮುಕ್ಕಾಲು ಹಿಸ್ಸೆ ವೊಬಲಗನ್ನು ಸದರೀಯವರು ಪಾವತಿ ಮಾಡತಕ್ಕದ್ದು. ಅಪ್ಪರಲ್ಲೀ ಹಣ ಪಾವತಿ ಮಾಡಲು ತಪ್ಪಿದರೆ ದರಖಾಸ್ತುದಾರ್‌ರು ವೊದಲು ಪಾವತಿ ಮಾಡಿದ ಕಾಲು ಹಿಸ್ಸೆ ಠೇವಣಿ ವೊಬಲಗು ಸರ್ಕಾರಕ್ಕೆ ದಂಡವಾಗಿ ಕೀರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನ ತಪ್ಪಿಸಲಾದೀತು. ಪೂರಾ ವೊಬಲಗು ಪಾವತಿಯಾದ ನಂತರ ಹರಾಜು ಕಾಲದಲ್ಲಿ ಫಾಯಿಷಾಗುವ ಪರತ್ತುಗಳ ಕಂಡು ದರಖಾಸ್ತುದಾರರು ಕರಾರು ಬರದುಕೊಡಬೇಕಾಗಿದೆ. ಇದಕ್ಕೆ ತಪ್ಪಿದರೆ ಜಿನಸಿಯನ್ನು ರೂಢಿಸಲು ಅಪ್ಪಣೆ ಕೊಡಲ್ಪಡಲಾರದು. ಪೂರಾ ಹರಾಜು ವೊಬಲಗಿನ ಮೇಲೆ ರೂಪಾಯಿಗೆ ಒಂದು ಆಣೆಯಂತೆ ಲೋಕಲ್‌ಸೆಸ್ ಕೊಡತಕ್ಕದ್ದು.

3. ಹರಾಜು ಡಿಪ್ಯೂಟಿ ಕಮ್ಮಿಷನರವರ ಮುಂಜೂರಾತಿಗೆ ವಳಪಟ್ಟಿರುತ್ತೆ.

4. ಇಜಾರೆದಾರನು ಹಿಡುವಳಿ ಜವಿನಾನಿನಲ್ಲಿರತಕ್ಕ ಮರಗಳ ಮತ್ತು ಸ್ವಂತ ಅನುರಾಯಿಗಳಲ್ಲಿ ದೊರೆಯುವ ಫಸಲನ್ನ ರೂಢಿಸಲು ಹಕ್ಕಿರುವದಿಲ್ಲ.

5. ಇನಾಂದಾರರ, ಸ್ಥಿರಪಟ್ಟ ಹಕ್ಕುದಾರಿಗೆ ಇಜಾರೆದಾರ್‌ರು ಪ್ರವೇಶಿಸಕೂಡದು.

6. ಗ್ರಾಮ ಅನುರಾಯಿ ಫಲ ಹುಟ್ಟುವಳಿಯು ವೇಲ್ಕಂಡ ಇಜಾರೆಯಲ್ಲಿ ಅಡಗಿರುವದಿಲ್ಲ.

7. ದರಖಾಸ್ತುದಾರರು ತಕ್ಕ ಸವಾಲ್ ಮಾಡದೆ ಹೋದರೆ ಹರಾಜು ಮಾಡುವ ಆಫಿಸರರು ಹರಾಜು ನಿಲ್ಲಿಸುವದಕ್ಕೂ ಅಥವಾ ಮುಂದೆ ಮತ್ತೊಂದು ವೇಳೆ ಹರಾಜು ಮಾಡುವದಕ್ಕೂ ಸ್ವತಂತ್ರರಾಗಿರುತ್ತಾರೆ.

ಯಂ. ಎಸ್. ನಾರಾಯಣರಾವ್,
ಡಿಪ್ಯೂಟಿ ಕಮ್ಮಿಷನರ್.

ಕೊಡಗು ಫಾರೆಸ್ಟ್ ಇಲಾಖೆ.

ನೋಟಿಸ್.

ತಾರೀಖು 7ನೇ ಸೆಪ್ಟಂಬರ್ 1896ನೇ ಇಸವಿ.

ಸ್ 1896ನೇ ಇಸವಿ ನವಂಬರ್ ತಾರೀಖು 25ರಲ್ಲು ಫ್ರೇಜರ್‌ಪೇಟೆಯಲ್ಲಿ ಹೆಚ್ಚು ಕಡಿಮೆ 120 ಟನ್ ಗಂಧ ಹರಾಜು ಹಾಕಲ್ಪಡುತ್ತದೆ.

ಷರತ್—ಸ್ 1895ನೇ ಇಸವಿ ಮೇ ತಿಂಗಳ ಕೊಡಗು ಡಿಸ್ಟ್ರಿಕ್ಟ್ ಗಜೆಟ್ಟಿನಲ್ಲಿ ಫಾಯಿಷ್ ಮಾಡಲ್ಪಟ್ಟ ಚೀಫ್ ಕಮ್ಮಿಷನರ್ ಸಾಹೆಬರವರ ಸ್ 1895ನೇ ಇಸವಿ ಏಪ್ರೆಲ್ ತಾರೀಖು 16ರ ನಂಬರ್ 4ರ ನೋಟಿಫಿಕೇಷನ್ ಮೇರೆ ಕೀಕಡಾ 25ರಷ್ಟು ಕ್ರಯವನ್ನು ಹರಾಜುಕಾಲದಲ್ಲಿ ಕೊಡತಕ್ಕದ್ದು. ಬಾಕಿ ವೊಬಲಗನ್ನು ಸ್ 1897ನೇ ಇಸವಿ ಮಾರ್ಚಿ ತಾರೀಖು 1ರ ವಳಗೇ ಸಾಕಲ್ಯವಾಗಿ ಪಾವತಿಮಾಡತಕ್ಕದ್ದು.

ಹರ್ಬ್. ವಿ,
ಕೊಡಗು ಫಾರೆಸ್ಟ್ ಡಿಪ್ಯೂಟಿ ಕನ್‌ಸರ್ವೇಟರ್.

ನೋಟಿಸ್.

ತಾರೀಖು 26ನೇ ಆಗಸ್ಟ್ 1896.

ಗೆಜೆಟ್ ಚಂದಾದಾರರು ಚಂದಾ ಹಣವನ್ನು ಪೋಸ್ಟ್‌ಆಫಿಸ್ ಮನಿಆರ್ಡರ್ ಮೂಲಕ ಕಳುಹಿಸುತ್ತಾ ಅವರ ಹೆಸರು ಸರಿಯಾದ ವಿಳಾಸ ಮುಂತಾದ ತಪ್ಪಿಲ್ಲದೆ ತಿಳಿಸದೇಲೂ ಮತ್ತು ರಿಕಾರ್ಡಿನಲ್ಲಿ ಯಿಡುವದಕ್ಕೆ ವಿಶೇಷ ಅನನುಕೂಲವಾಗಿರುವಂಥಾ ಕೂಪನ್‌ಗಳ ಮೇಲೆ ಅಸ್ಪಷ್ಟವಾಗಿ ಬರಿಯುವದರಿಂದಲೂ ವಿಶೇಷ ಗಲಾಟೆಗೆ ಆಸ್ಪದವಾಗಿರುವದರಿಂದ ಸರ್ವರಿಗೂ ತಿಳಿಸುವದೇನಂದರೆ,—ಯಲ್ಲಾ ತಾಲ್ಲೂಕು ಖಜಾನೆಗಳಲ್ಲಿಯೂ ಗೆಜೆಟ್ ಚಂದಾ ವೊಬಲಗು ತೆಗದುಕೊಂಡು ರೀತಿ ಕೊಡುವ ಬಗ್ಯಾಗಿ ಅಪ್ಪಣೆ ಯಿರುವದ್ದರಿಂದ ಇನ್ನು ಮೇಲೆ ಮೈಸೂರ ಠೇವೆ ಅಲ್ಲದ ಇತರ ಸ್ಥಳಗಳಿಂದ ಬರುವ ಮನಿಆರ್ಡರ್ ಹೊರ್ತಾಗಿ ಅನ್ಯಥಾ ಆ ಬಗ್ಯಾಗಿ ಈ ಆಫಿಸಿಗೆ ಕಳುಹಿಸಲ್ಪಡುವ ಯಾವ ಮನಿಆರ್ಡರುಗಲಿ ಈ ಆಫಿಸನಲ್ಲಿ ಅಂಗೀಕರಿಸಲ್ಪಡಲಾರದು ಮತ್ತು ಪೋಸ್ಟ್ ಕಾರ್ಡ್ ಮೂಲಕ ಅಥವಾ ನೋಟ್ ಪೇಪರಿಗಿಂತಲೂ ಕಮ್ಮಿಯಾದ ಕಾಗದ್ದಲ್ಲಿ ಬರಿಯಲ್ಪಡುವ ಯಾವ ಅಂಕಕ್ಕೂ ನಿಗೆ ಕೊಡಲ್ಪಡಲಾರದು.